

ಎನ್.ಪಿ. ಮಂಜುನಾಥ್

# ಶೋಧನೆ

ನಾನು ಬೆಳಗಿನ ವಾಕಿಂಗ್ ಮುಗಿಸಿ ಮನೆಯ ಒಳಗೆ ಬರುತ್ತಿದ್ದ ಹಾಗೇ ದೇವರ ಕೋಣೆಯ ಬಾಗಿಲು ಹಾಕಿ ಸಣ್ಣದೊಂದು ಬೀಗ ತಗುಲಿಸುತ್ತಿದ್ದ ಅವಳು ಹೇಳಿದಳು: 'ನಾಗಣ್ಣ ಹೋಗಿ ಬಿಟ್ರಂತೆ; ಇನ್ನೊಂದು ವಾರ ದೇವರ ಮನೆಗೆ ಹೋಗಿ ಏಕ ಮಾಡ್ಬೇಡಿ.'

ಒಂದು ಕ್ಷಣ ನಾನು ಸ್ತಬ್ಧನಾಗಿ ಬಿಟ್ಟೆ. ತೀರಾ ಅನಿರೀಕ್ಷಿತವಾದ ಆ ಸುದ್ದಿ ಏಕೋ ನನ್ನ ಜಂಘಾಬಲವನ್ನೇ ಉಡುಗಿಸಿ ಬಿಟ್ಟಿತು.

'ಯಾರು ಫೋನ್ ಮಾಡಿದ್ರು?'

'ಯಾರೂ ಇಲ್ಲ. ಅದರಲ್ಲೂ ನಿಮಗೆ ತಿಪಟೂರಿನಿಂದ ಯಾರು ಸುದ್ದಿ ತಿಳಿಸ್ತಾರೆ ಹೇಳಿ.'

'ಮತ್ತೆ, ನಿಂಗೆ ಹೇಗೆ ಗೊತ್ತಾಯ್ತು?'

'ಯಾರೋ, ಮೂರನೆಯವರು ನನಗೂ ತಿಳಿಸಿದ್ರು.'

'ಸರಿ, ನಾನು ಹೋಗ್ಬರ್ತೀನಿ, ನೀನೂ ಬರ್ತೀಯ' ಅಂದೆ.

'ಎಲ್ಲಿಗೆ? ಸರಿ ಹೋಯ್ತು. ನಿಮ್ಮನ್ನು ಯಾರೂ ಕರೆದಿಲ್ಲ. ಅಷ್ಟಕ್ಕೂ ನೀವೂ ಆ ಮನೆಯವರೇ ಅಂತಾ ಅವರಿಗೇ ಮರೆತು ಹೋಗಿದೆ. ನೀವು ಎಲ್ಲಿಯೂ ಹೋಗಬೇಕಿಲ್ಲ.'

'ಅಲ್ಲ ಕಣೆ, ನಾಗಣ್ಣ ಏನು ನನಗೆ ದೂರವಾದನೆ? ಸ್ವಂತ ಚಿಕ್ಕಪ್ಪ. ಸಾವಿನ ಸಮಯದಲ್ಲಿ ಹಟ ಮಾಡಬಾರದು. ನಾನು ಹೊರಟೆ. ಎಷ್ಟು ಹೊತ್ತಿಗಂತೆ?'

'ಅವರು ಹೋಗಿ ಆರು ದಿನ ಆಯ್ತು. ಅವರ ಅಂತ್ಯಕ್ರಿಯೆಗಾಗಲೀ, ಕ್ರಿಯಾ ಕರ್ಮಗಳಿಗಾಗಲೀ ಯಾರೂ ನಿಮ್ಮನ್ನು ಕರೆದಿಲ್ಲ.'

ನಾನು ಸೋಫಾ ಮೇಲೆ ಕುಕ್ಕರಿಸಿದೆ. ಇನ್ನೂ ಇವತ್ತು ಹೋಗಿರಬಹುದು ಎಂದುಕೊಂಡಿದ್ದ ನನಗೆ ಇನ್ನೂ ಆಘಾತವಾಯಿತು.

'ಪಾಪ, ನಮ್ಮ ಫೋನ್ ನಂಬರ್ ಅವರ ಹತ್ರ ಇಲ್ಲ. ನಾವು ರಿಟೈರಾದ ಮೇಲೆ ಇದೇ ಊರಲ್ಲಿ ಇದೀವೋ ಇಲ್ಲವೋ, ಗೊತ್ತಿಲ್ಲ. ಹೇಗೆ ತಿಳಿಸ್ತಾರೆ ಹೇಳಿ. ಅದೂ ಅಲ್ಲದೆ, ನೀವು ಹೋಗದಿದ್ರೂ ಎಲ್ಲ ಕಾರ್ಯ ಸಾಂಗವಾಗೇ ನಡೆದಿರುತ್ತೆ ಬಿಡಿ.'

ಅವಳ ದನಿಯಲ್ಲಿನ ವ್ಯಂಗ್ಯ ನನಗೆ ಅರ್ಥವಾಗದ್ದೇನಾಗಿರಲಿಲ್ಲ. ಅದೇ ಜಿಲ್ಲೆಯಲ್ಲಿದ್ದೂ, ಇಂಥ